SC No. 9/2024
PW.-03

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್.ಸಿ. 9/2024

| | | |
|---|---|---|
| ಸಾಕ್ಷಿದಾರರ ಹೆಸರು | ಗಧಾಧರ ಭಟ್ | ಪ್ರಮಾಣ ವಚನ ಮಾಡಿದ ದಿನಾಂಕ: **01.09.2025** |
| ತಂದೆಯ/ಗಂಡನ ಹೆಸರು | ಚಂದ್ರಶೇಖರ ಭಟ್ | |
| ವಯಸ್ಸು | 52 ವರ್ಷ | |
| ವೃತ್ತಿ | ವ್ಯಾಪಾರ | ಪ್ರಾ.ಸಾಃ 03 |
| ವಾಸ ಸ್ಥಳ | ತಿಲಕ್ ನಗರ ಶನಿಮಹಾತ್ಮ ಆರ್ಚ್ , ಮೈಸೂರು | ಚಾ.ಸಾಃ 07 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಸ್ಥಳ ಪಂಚಾನಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆಯನ್ನು ನಿಪಿ–1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ದಿನಾಂಕ 27.07.2022 ರಂದು ನಮ್ಮ ಅಂಗಡಿಗೆ ಮಂಡಿ ಪೊಲೀಸರು ಬಂದಿದ್ದರು ನಿನ್ನೆಯ ದಿವಸ ಶನಿಮಹಾತ್ಮ ಆರ್ಚ್ ನ ಹತ್ತಿರ ಹೊಡೆದಾಟ ಆಗಿರುತ್ತದೆ ಮಹಜರ್ ಮಾಡಲು ಬಂದಿರುತ್ತೇವೆ ಎಂದು ತಿಳಿಸಿದ್ದರು. ಪೊಲೀಸರು ನನ್ನ

ಅಂಗಡಿಯಿಂದ 10 ಅಡಿ ದೂರದಲ್ಲಿ ಇರುವ ಆರ್ಚ್ ನ ಹತ್ತಿರ ಕರೆದುಕೊಂಡು ಹೋಗಿದ್ದರು. ಸಂದೀಪ್ ಎನ್ನುವವರು ಸಹ ಆ ಸ್ಥಳಕ್ಕೆ ಬಂದಿದ್ದರು. ಪೊಲೀಸರು ಯಾವುದೋ ಒಬ್ಬ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷಿದಾರರನ್ನು ಕರೆದುಕೊಂಡು ಬಂದಿದ್ದರು. ಸ್ಥಳದಲ್ಲಿ ರಕ್ತದ ಕಲೆಗಳು ಬಿದ್ದಿದ್ದವು ಅವುಗಳನ್ನು ಕಬ್ಬಿಣದ ರಾಡ್ ನಿಂದ ಕೆತ್ತಿ ಒಂದು ಬಾಕ್ಸ್ ಗೆ ತುಂಬಿಸಿಕೊಂಡಿದ್ದರು. ಇನ್ನೊಂದು ಬಾಕ್ಸ್ ನಲ್ಲಿ ಖಾಲಿ ಕಲೆಗಳು ಇಲ್ಲದ ಗಾರೆ ತುಂಬಿಸಿಕೊಂಡಿದ್ದರು. ಅವೆರಡನ್ನು ಒಂದು ಬ್ಯಾಗ್ ನಲ್ಲಿ ಹಾಕಿ ನಂಬರ್ ಬರೆದುಕೊಂಡಿದ್ದರು ಆ ನಂತರ ನನ್ನ ಕಡೆಯಿಂದ ಸಹಿ ತೆಗೆದುಕೊಂಡಿದ್ದರು.

ನಾನು ಪೊಲೀಸರು ಆ ದಿನ ಸ್ಥಳದಿಂದ ತೆಗೆದುಕೊಂಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

( ಸಾಕ್ಷಿದಾರರಿಗೆ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಸಾಕ್ಷಿದಾರರು ರಕ್ತಮಯವಾದ ಗಾರೆಯ ಚಕ್ಕೆ ಮತ್ತು ರಕ್ತಮಯವಲ್ಲದ ಗಾರೆಯ ಚಕ್ಕೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂ.ಒ–3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿದರರು ನೋಡಿ ಗುರುತಿಸಿದ ತನ್ನ ಸಹಿಗಳನ್ನು ಎಂ.ಒ–3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇರುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದ ಫೋಟೋವನ್ನು

ನಿಪಿ–2 ಎಂದು ಗುರುತಿಸಲಾಯಿತು. ನಿಪಿ–2 ರ ಫೋಟೋದಲ್ಲಿ ನಾನು ಇರುತ್ತೇನೆ.

**ಪಾಟೀ ಸವಾಲುಃ 1 ಆರೋಪಿ ಪರ ವಕೀಲರಿಂದ :**

**1 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಖರ್ಚು ನೀಡುವ ಷರತ್ತಿನೊಂದಿಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.